## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ

**ಎಸ್.ಸಿ. ನಂಃ 190/2022**

**ಪಿಡಬ್ಲ್ಯೂ: 01**

**ಸಿಡಬ್ಲ್ಯೂ: 01**

**ದಿನಾಂಕಃ 22-11-2023**

| | | |
|---|---|---|
| ಸಾಕ್ಷಿದಾರರ ಹೆಸರು | : | ರಘು ನಾಯಕ |
| ತಂದೆ ಹೆಸರು | : | ಅರ್ಜುನ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕೂಡಗಿ ತಾಂಡಾ |

**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

**1)** ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನನಗೆ ಗೊತ್ತು. ಚಾಸಾ.2 ಭೋಜು, ಚಾಸಾ.3 ಪರಶುರಾಮ ಲಮಾಣಿ ಇವರು ಗೊತ್ತು. ಚಾಸಾ.4 ಶೇಖುಬಾಯಿ ನನ್ನ ತಾಯಿ, ಚಾಸಾ.5 ಅರ್ಜುನ ನನ್ನ ತಂದೆ, ಚಾಸಾ.6 ಸುನೀಲ್ ನನ್ನ ತಮ್ಮ, ಚಾಸಾ.7 ರಿಂದ 12 ಇವರು ನನಗೆ ಗೊತ್ತು ಅವರು ನನ್ನ ಸಂಬಂದಿಕರು ಇರುತ್ತಾರೆ.

**2)** ಈಗ ಎರಡು ವರ್ಷಗಳ ಹಿಂದೆ ನನ್ನ ತಾಯಿ ಚಾಸಾ.4 ಶೇಖುಬಾಯಿ ಇವರು ಕೂಡಗಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. 2 ನೇ ಆರೋಪಿ ರಾಜು ಈತನು ಏನು ಉದ್ಯೋಗ ಮಾಡುತ್ತಿದ್ದನು ನನಗೆ ಗೊತ್ತಿಲ್ಲ.

**3)** ನನ್ನ ತಾಯಿ ಕೂಡಗಿ ಪಂಚಾಯತಿರ ಅಧ್ಯಕ್ಷರಾಗಿದ್ದಾಗ ನಮಗೆ ಹಾಗೂ ಆರೋಪಿತರ ನಡುವೆ ಯಾವುದೇ ಜಗಳ, ಗಲಾಟೆ ಆಗಿರುವುದಿಲ್ಲ. ಆರೋಪಿಗಳು ಅಕ್ರಮ ಕೂಟ ಕಟ್ಟಿಕೊಂಡು ಬಂದು ನನಗೆ ಅವಾಚ್ಯವಾಗಿ ಬೈದು ಮಾರಣಾಂತಿಕವಾಗಿ ಹಲ್ಲೆ ಮಾಡಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ.

**4)** ಗಲಾಟೆ ವಿಚಾರವಾಗಿ ನಾನು ಆರೋಪಿತರ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ.

ಎಸ್.ಸಿ. ನಂಃ 190/2022
**ಪಿಡಬ್ಲೂಃ 01**

**5)** ನಾನು ಆರೋಪಿತರ ಹಲ್ಲೆಯಿಂದ ಆಸ್ಪತ್ರೆಗೆ ದಾಖಲಾಗಿಲ್ಲ, ಆದರೆ ಎರಡು ವರ್ಷಗಳ ಹಿಂದೆ ಒಂದು ದಿನ ಕೂಡಗಿ ಜಾತ್ರೆಯಲ್ಲಿ ನಾವಿದ್ದ ಗುಂಪಿನ ಮೇಲೆ ಯಾರೋ ಅಪರಿಚಿತರು ಕಲ್ಲುಗಳನ್ನು ಎಸೆದಿದ್ದರಿಂದ ವಿಜಯಪುರದ ಬಿ.ಎಲ್.ಡಿ.ಸಿ ಆಸ್ಪತ್ರೆಯಲ್ಲಿ ಚಕಿತ್ಸೆ ಪಡೆದುಕೊಂಡಿರುತ್ತೇನೆ.

**6)** ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು ಆರೋಪಿತರ ವಿರುದ್ಧ ಸಾಕ್ಷಿಯು ನೀಡಿದರು ಎನ್ನಲಾದ ದೂರು ಆಗಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಾನು ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲಿಸರು ಬಂದಿದ್ದು, ಆಗ ಅವರ ಕೋರಿಕೆಯ ಮೇರೆಗೆ ನಾನು ನಿ.ಪಿ.1 ದೂರಿಗೆ ಸಹಿ ಮಾಡಿರುತ್ತೇನೆ. ಆದರೆ ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ನಾನು ಆರೋಪಿತರ ವಿರುದ್ಧ ನಿ.ಪಿ.1 ರಂತೆ ದೂರು ನೀಡಿರುವುದಿಲ್ಲ.

**7)** ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಪಿ.ಪಿ.ರವರು ಕೋರಿರುತ್ತಾರೆ. ವಾದ ಕೇಳಿ ಅನುಮತಿ ಕೊಡಲಾಯಿತು.)**

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

**8)** ನನ್ನ ತಾಯಿ ಶೇಖುಬಾಯಿ ಗ್ರಾಮ ಪಂಚಾಯತಿ ಅಧ್ಯಕ್ಷರು ಆದ ಸಮಯದಲ್ಲಿ 2 ನೇ ಆರೋಪಿ ರಾಜು ಈತನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗಟಾರ ಸ್ವಚ್ಛಗೊಳಿಸುವ ಗುತ್ತಿಗೆ ಮಾಡಿದ್ದು, ಅದರ ಹಣದ ಚೆಕ್ಕಿಗೆ ನನ್ನ ತಾಯಿಯನ್ನು ಸಹಿ ಮಾಡಲು 2 ನೇ ಆರೋಪಿ ಕೇಳಿಕೊಂಡಾಗ, ನನ್ನ ತಾಯಿ ಅದನ್ನು ಪರಿಶೀಲಿಸಿ ಸಹಿ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಇದರಿಂದ 2 ನೇ ಆರೋಪಿಯು ನನ್ನ ತಾಯಿಯ ಮೇಲೆ ಸಿಟ್ಟಾಗಿ ಅವಳ ಜೊತೆ ಬಾಯಿ ಮಾತಿನ ಜಗಳ ಮಾಡಿದ್ದ ಎಂದರೆ ಸರಿಯಲ್ಲ.

**9)** ದಿ.**08.12.2021** ರಂದು **1** ನೇ ಆರೋಪಿಯನ್ನು ಕರೆದುಕೊಂಡು **2** ನೇ ಆರೋಪಿಯು ನಮಗೆ ಹೊಡೆಯುವ ಉದ್ದೇಶದಿಂದ ನಮ್ಮ ತಾಂಡಾಕ್ಕೆ ಬಂದು, **1** ನೇ ಆರೋಪಿ ಈತನು ತಾನು ಪೋಲಿಸ್ ಇರುತ್ತೇನೆ ಎಂದು ಹೇಳಿ, ಆತನ ಮನೆಯವರೆಲ್ಲರೂ ಕೂಡಿಕೊಂಡು ಬಡಿಗೆ ಕಲ್ಲುಗಳನ್ನು ತೆಗೆದುಕೊಂಡು ನಮ್ಮ ಹತ್ತಿರ ಬಂದು ನಮ್ಮನ್ನು ಸಾಯಿಸಿಬಿಡುತ್ತೇವೆ ಎಂದು ಹೇಳಿ, ಒಮ್ಮೆಲೆ ನಮ್ಮ ಮೇಲೆ ದಾಳಿ ಮಾಡಿ, ನನಗೆ ನನ್ನ ತಂದೆ ತಾಯಿಯ ಮೇಲೆ ನಮ್ಮ ಚಿಕ್ಕಪ್ಪನಿಗೆ ಹಾಗೂ ಇತರ ಸಾಕ್ಷಿದಾರರಿಗೆ ಹೊಡಿ ಬಡಿ ಮಾಡಿ, ನಾನು ಕಾರು ತೆಗೆದುಕೊಂಡಿದ್ದೆ ನಿಮ್ಮನ್ನು ಸಾಯಿಸಲಿಕ್ಕಾಗಿ ಎಂದು ಬೈದು, ಸದರಿ ಕಾರನ್ನು ನಮ್ಮನ್ನು ಖಲಾಸ ಮಾಡುವ ಉದ್ದೇಶದಿಂದ **1** ಮತ್ತು **2** ನೇ ಆರೋಪಿತರು ವೇಗವಾಗಿ ಚಲಾಯಿಸಿಕೊಂಡು ಬಂದು ಹಾಯಿಸಿದರು ಎಂದರೆ ಸರಿಯಲ್ಲ. ಇದರಿಂದ ನಾನು ಡಿಕ್ಕಿಯಾಗಿ ನನ್ನ ಎಡಗೈಗೆ, ಬಲಬಾಗದ ತೊಡೆಭಾಗಕ್ಕೆ ಮತ್ತು ಇತರ ಕಡೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಘಟನೆಯಿಂದ ಇತರ ಸಾಕ್ಷಿದಾರರಿಗೂ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳು ನಮಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. **1** ನೇ ಆರೋಪಿಯು ತಾನು ಬೆಂಗಳೂರಿನಲ್ಲಿ ಪೋಲಿಸ್ ಕೆಲಸ ಮಾಡುತ್ತೇನೆ ತನ್ನನ್ನು ಯಾರು ಏನು ಮಾಡಿಕೊಳ್ಳುವುದಿಲ್ಲ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾಸಾ.**10** ಮತ್ತು **11** ರವರು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಸದರಿ ಗಲಾಟೆಯು ಸಾಯಂಕಾಲ **5** ಗಂಟೆಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರ ಹಲ್ಲಗೊಳಗಾಗಿ ನಾನು ಮತ್ತು ಇತರ ಸಾಕ್ಷಿದಾರರು ವಿಜಯಪುರದ ಬಿ.ಎಲ್.ಡಿ.ಇ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದೆವು ಎಂದರೆ ಸರಿಯಲ್ಲ.

**10)** ಈಗ ಮೇಲಿನಂತೆ ಓದಿ ಹೇಳಿದಂತೆ ನಾನು ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿದ್ದಾಗ ಪೋಲಿಸರಿಗೆ ಆರೋಪಿಗಳ ವಿರುದ್ದ ನಿ.ಪಿ.**1** ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

**11)** ದಿ.**10.12.2021** ರಂದು ಪೋಲಿಸರಿಗೆ ಮರು ಹೇಳಿಕೆ ನೀಡಿ, ಘಟನೆಯಲ್ಲಿ ನಮ್ಮ ಕಾಕಾನ ಮಗನಾದ ಚಾಸಾ.**8** ಬಸವರಾಜ ಈತನಿಗೂ ಸಹ ಗಾಯಗಳಾಗಿರುವ ಬಗ್ಗೆ ಹಾಗೂ ಆತನು ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ಸಾಕ್ಷಿಯು ಅಲ್ಲಗಳೆದಿದ್ದರಿಂದ ಅದನ್ನು ನಿ.ಪಿ.**2** ಎಂದು ಗುರುತಿಸಲಾಯಿತು.

**ಎಸ್.ಸಿ. ನಂಃ 190/2022**
**ಪಿಡಬ್ಲೂ: 01**

**12)** ನಾನು ಘಟನೆಯ ಕುರಿತಂತೆ ಆರೋಪಿಗಳ ವಿರುದ್ದ ನಿ.ಪಿ.**1** ರಂತೆ ದೂರು ಹಾಗೂ ಘಟನೆ ಬಗ್ಗೆ ನಿ.ಪಿ.**2** ರಂತೆ ಮರುಹೇಳಿಕೆ ನೀಡಿದ್ದರೂ ಕೂಡ ಪ್ರಕರಣದಲ್ಲಿ ನಾವು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ  ಆರೋಪಿತರ ಪರ ಶ್ರೀ.ಎಮ್.ಎಸ್.ಕೆ ವಕೀಲರಿಂದ:</u>**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.